ಎಂ.ವಿ.ಸಿ. 597/2023, ಆರ್.ಡಬ್ಲ್ಯೂ.1 ಹೆಸರುಃ ಪ್ರದೀಪ್.ಎಸ್.ಪಿ.

**ದಿಃ17-06-2026 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ 1 ನೇ ಎದುರುದಾರರ ಪರ ಶ್ರೀ ಎಸ್.ಎಸ್. ವಕೀಲರಿಂದಃ**

ನಾನು ನನ್ನ ಪ್ರಮಾಣ ಪತ್ರಿಕೆಯನ್ನು ಸಲ್ಲಿಸಿರುತ್ತೇನೆ. ಇದರಲ್ಲಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತದೆ. ಪ್ರಮಾಣ ಪತ್ರದಲ್ಲಿ ಇರುವ ಸಹಿಗಳು ನನ್ನದೇ ಆಗಿರುತ್ತದೆ.

ಕೆ.ಎ.17/ಎನ್.4594 ರ ವಾಹನದ ವಿಮಾ ಪಾಲಿಸಿಯನ್ನು ಹಾಜರುಪಡಿಸಿದ್ದು ಅದನ್ನು ನಿಆರ್.1 ಎಂದು ಗುರುತಿಸಲಾಯಿತು.

**ಪಾಟೀ ಸವಾಲು : 4 ನೇ ಎದುರುದಾರರ ಪರ ಶ್ರೀ ಪಿ.ಎನ್. ವಕೀಲರಿಂದ**

2. ನನಗೆ ಸೇರಿದ ಮಾರುತಿ ಓಮಿನಿ ವಾಹನದ ಚಾಲಕನಾಗಿ ಮಹೇಶರವರು ಇದ್ದರು. ಪೊಲೀಸ್ ಠಾಣೆಯಲ್ಲಿ ನಾನು ಮತ್ತು ಮಹೇಶ್‌ರವರು ಮಾರುತಿ ಓಮಿನಿ ವಾಹನವನ್ನು ಮಧ್ಯಂತರ ವಶಕ್ಕೆ ಪಡೆದಿದ್ದೇವೆ. ತನಿಖಾಧಿಕಾರಿಗಳು ಸಲ್ಲಸಿರುವ ದೋಷಾರೋಪಣ ಪಟ್ಟಿಯನ್ನು ನೋಡಿರುತ್ತೇನೆ. ಅಪಘಾತವು ಮಾರುತಿ ಓಮಿನಿ ವಾಹನದ ತಪ್ಪಿನಿಂದ ಮಾತ್ರ ಆಗಿರುತ್ತದೆ ಎಂದರೆ ಸಾಕ್ಷಿ ಟ್ರಾಕ್ಟರ್‌ನ್ನು ಯಾವುದೇ ಸೂಚನೆ ನೀಡದೆ ಮಧ್ಯ ರಸ್ತೆಯಲ್ಲಿ ನಿಲ್ಲಿಸಿದ್ದು, ಹಾಗಾಗಿ ಟ್ರಾಕ್ಟರ್ ಚಾಲಕನ ತಪ್ಪು ಕೂಡ ಇರುತ್ತದೆ ಎಂದು ಹೇಳುತ್ತಾರೆ. ಅಪಘಾತದ ಕುರಿತು ನನಗೆ ನಂತರ ತಿಳಿದುಬಂದಿತು.

**ಪಾಟೀ ಸವಾಲು : 2 ನೇ ಎದುರುದಾರರ ಪರ ಶ್ರೀ ಜಿ.ಎಂ.. ವಕೀಲರಿಂದ**

3. ಮಾರುತಿ ಓಮಿನಿ ವಾಹನದ ಚಾಲಕ ನಾಗೇನಹಳ್ಳಿ ಗ್ರಾಮಕ್ಕೆ ಸೇರಿದವರು. ಹೊಣೆಗಾರಿಕೆ ವಿಮೆ ಇರುವ ಕಾರಣ 2 ನೇ ಎದುರುದಾರರು ಪರಿಹಾರವನ್ನು ಪಾವತಿಸಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಅರ್ಜಿದಾರರ ಪರ ಶ್ರೀ ಕೆ.ಇ.ಸಿ. ವಕೀಲರಿಂದ**

4. ಅಪಘಾತ ಟ್ರಾಕ್ಟರ್ ಮತ್ತು ಓಮಿನಿ ನಡುವೆ ಏರ್ಪಟ್ಟಿರುತ್ತದೆ ಎಂದರೆ ಸರಿ. ಅಪಘಾತವು ಟ್ರಾಕ್ಟರ್ ಮತ್ತು ಓಮಿನಿ ವಾಹನಗಳ ಚಾಲಕರ ತಪ್ಪಿನಿಂದ ಅಪಘಾತ ಏರ್ಪಟ್ಟಿರುತ್ತದೆ ಎಂದು ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಹಾಗಾಗಿ ಎರಡೂ ವಾಹನಗಳ ಮಾಲೀಕರು ಮತ್ತು ವಿಮಾದಾರರು ಪರಿಹಾರವನ್ನು ಪಾವತಿಸಲು ಬಾಧ್ಯಸ್ಥಿರಿರುತ್ತಾರೆ ಎಂದರೆ ಸರಿ.

**ಮರುವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ